ಕ್ಷಣಮಾತ್ರದಲ್ಲಿ ಕಾರು ಬುಡಮೇಲಾಗಿ ಪಕ್ಕದ ಹೊಂಡಕ್ಕೆ ಬಿದ್ದಿತ್ತು. ಮಕ್ಕಳು ಗಾಡಿಯ ಸೀಟಿನ ಕೆಳಗೆ ಬಿದ್ದಿದ್ದರೆ ಮುದುಕಿ ಮುಂದಿನ ಸೀಟಿಗೆ ಬಂದು ಬಿದ್ದಿದ್ದಳು. ಕಾರಿನ ಬಾಗಿಲು ಮುರಿದುಕೊಂಡು ಮಗುವನ್ನು ಅವಚಿಕೊಂಡೆ ತಾಯಿ ಹೊರಗೆ ಬಂದು ಬಿದ್ದಳು. ಯಜಮಾನ ಬೇಲಿ ಡ್ರೈವರ್ ಸೀಟಿನಲ್ಲಿಯೇ ಗಟ್ಟಿಯಾಗಿ ಕುಳಿತಿದ್ದ. ಅವನ ಹಣೆಗೆ ಗಾಯವಾದಂತಿತ್ತು. ಮತ್ತೂ ಹೆದರಿದ್ದ ಬೆಕ್ಕು ಅವನ ಕೊರಳಿಗೆ ಇನ್ನೂ ಅಂಟಿಕೊಂಡಿತ್ತು. ಮಕ್ಕಳು ಹಾಗೂ ಹೀಗೂ ತೆವಳಿಕೊಂಡು ಕಾರಿನ ಹೊರಗೆ ಬಂದರು. 'ಓಹೋ, ಆ್ಯಕ್ಸಿಡೆಂಟ್! ಆ್ಯಕ್ಸಿಡೆಂಟ್!' ಅಪಘಾತಗಳ ಬಗ್ಗೆ ಕುತೂಹಲ ಇದ್ದುದರಿಂದ ಅಪಘಾತ ಆದದ್ದನ್ನು ಅವರು ಸಂಭ್ರಮಿಸುತ್ತಿರುವಂತೆ ಅನಿಸಿತು. ಅಪಘಾತ ಆಗಿದೆ, ಆದರೆ ಯಾರೂ ಸಾಯಲಿಲ್ಲ ಎಂದು ಆ ಪುಟ್ಟ ಮಕ್ಕಳಿಗೆ ನಿರಾಶೆಯಾಯಿತು!

ಕಾರಿನಿಂದ ಹೊರಗೆ ಬಂದ ಬೇಲಿ ಹೆಂಡತಿಗಾಗಿ ನೋಡಿದ. ಹೊಂಡದಲ್ಲಿ ಬಿದ್ದಿದ್ದ ಅವಳು ಚೀರುತ್ತಿದ್ದ ಮಗುವನ್ನು ಸಂಭಾಳಿಸುತ್ತಿದ್ದಳು. ಅವಳ ಮುಖದಲ್ಲಿ ಒಂದು ಉದ್ದ ಗೀರಿನಿಂದ ರಕ್ತ ಸುರಿಯುತ್ತಿತ್ತು. ಕೈ ಮುರಿದಿತ್ತು. ಅವರೆಲ್ಲ ತಾವು ಬಿದ್ದಿದ್ದ ಕಂದಕದ ಸುತ್ತ ಕುಳಿತರು. ಅವರಿಗಾಗಿದ್ದ ಆಘಾತದಿಂದ ಅವರ ಮೈಮನಗಳು ನಡುಗುತ್ತಿದ್ದವು. ಬೇಲಿಯ ಹಲ್ಲುಗಳು ಬಿದ್ದುಬಿಡುತ್ತವೆಯೇನೋ ಎನ್ನುವಂತೆ ಒಂದೇ ಸಮನೆ ಉರಿಯುತ್ತಿದ್ದವು. ಅವನು ತೊಟ್ಟಿದ್ದ ಹಳದಿ ಶರ್ಟ್‌ನಲ್ಲಿಯ ಹಸಿರು ಗಿಳಿಗಳು ಮಂಕಾಗಿದ್ದವು. ನನ್ನ ಎಲುಬು ಮುರಿಯುತೇನೊ ಎಂದು ಅಜ್ಜಿ ತನ್ನ ತೋಳನ್ನು ಅದುಮಿಕೊಳ್ಳುತ್ತಿದ್ದಳು. ಅವಳಿಗೆ ಯಾರೂ ಉತ್ತರ ಕೊಡಲಿಲ್ಲ.

'ಈ ಕಡೆ ಯಾವುದಾದೂ ಗಾಡಿ ಬಂದರೆ ಚೊಲೋ...' ಮಗುವನ್ನು ರಮಿಸುತ್ತ, ತಾನೂ ಅಳುತ್ತ ಬೇಲಿಯ ಹೆಂಡತಿ ಪ್ರಾರ್ಥಿಸುತ್ತಿದ್ದಳು.

ಅವರು ಬಿದ್ದಿದ್ದ ಕಂದಕದಿಂದ ರಸ್ತೆ ಸುಮಾರು ಹತ್ತು ಫೂಟು ಎತ್ತರದಲ್ಲಿತ್ತು. ರಸ್ತೆ ಮೇಲೆ ಏನು ಹೋಗುತ್ತದೆ ಎಂದು ಅಷ್ಟು ಸುಲಭವಾಗಿ ತಿಳಿಯಲಾರದು. ಅವರ ಕುಳಿತಿದ್ದ ಹಿಂದುಗಡೆ ಮತ್ತು ರಸ್ತೆಯ ಆ ಕಡೆ ದಟ್ಟ ಅರಣ್ಯವಿತ್ತು. ಏನೂ ತೋಚದೆ ಅವರು ಕುಳಿತಿರುವಾಗ ದೂರದ ಬೆಟ್ಟದಲ್ಲಿ ಒಂದು ಕಾರು ಕಾಣಿಸಿಕೊಂಡಿತು. ಏರುಇಳಿವಿನ ಗುಡ್ಡದ ರಸ್ತೆಯಲ್ಲಿ ಅದು ಒಂದು ಸಲ ಕಾಣುತ್ತಿತ್ತು. ಮತ್ತೊಂದು ಸಲ ಮರೆಯಾಗುತ್ತಿತ್ತು. ಅಜ್ಜಿ ಸ್ವಲ್ಪ ಎತ್ತರದಲ್ಲಿ ನಿಂತು ತನ್ನ ಎರಡೂ ಕೈಗಳನ್ನು ಬೀಸತೊಡಗಿದಳು. ದೇವರೆ, ಆ ವಾಹನ ನಿಲ್ಲುವಂತೆ ಮಾಡು. ಪ್ರತಿಯೊಬ್ಬರೂ ಮನಸ್ಸಿನಲ್ಲಿ ಬೇಡಿಕೊಳ್ಳತೊಡಗಿದರು. ಹತ್ತಿರ ಬರುತ್ತಿರುವಂತೆ ಗಾಡಿಯ ಆಕಾರ, ಬಣ್ಣ ಸ್ಪಷ್ಟವಾಗಿ ಕಾಣತೊಡಗಿತು. ಶವಸಂಸ್ಕಾರಕ್ಕೆ ಹೆಣ ಸಾಗಿಸುವ ವಾಹನದಂತೆ ಇದ್ದ ಆ ದಟ್ಟ ಕಪ್ಪು ಬಣ್ಣದ ಟೆಂಪೊ ಅಂತೂ ಇಂತೂ ಇವರನ್ನು ನೋಡಿ ನಿಂತಿತು. ಡ್ರೈವರ್ ಹಣಿಕಿ ಹಾಕಿ ಇವರನ್ನು ನೋಡಿದ. ಗಾಡಿಯಲ್ಲಿದ್ದ ಇನ್ನಿಬ್ಬರ ಜೊತೆ ಏನೋ ವಟಗುಟ್ಟಿದಂತೆ ಮಾಡಿದ. ಸ್ವಲ್ಪ ಹೊತ್ತಿನ ಮೇಲೆ ಇಬ್ಬರು ಗಾಡಿಯಿಂದ ಹೊರಗೆ ಬಂದರು. ಅದರಲ್ಲಿ ಒಬ್ಬ ತರುಣ ಕಪ್ಪುಬಣ್ಣದ ಪ್ಯಾಂಟು, ಕೆಂಪು ಅಂಗಿ ತೊಟ್ಟಿದ್ದ. ಇನ್ನೊಬ್ಬ ಖಾಕಿ ಪ್ಯಾಂಟ್, ನೀಲಿ ಚೌಕಳಿ ಕೋಟ್ ಧರಿಸಿದ್ದ. ಅದಾದ ಮೇಲೆ ಆ ಗಾಡಿಯ ಡ್ರೈವರ್ ಕೂಡ ಹೊರಗೆ ಬಂದು ಇವರನ್ನು ದಿಟ್ಟಿಸತೊಡಗಿದ. ಅವನು ಆ ಇಬ್ಬರಿಗಿಂತ ವಯಸ್ಸಾದವನಂತೆ ಇದ್ದ. ಕೂದಲು ಅಲ್ಲಲ್ಲಿ ಬೆಳ್ಳಗಾಗಿತ್ತು. ಅವನು ಹಾಕಿದ್ದ ಕನ್ನಡಕಕ್ಕೆ ಬೆಳ್ಳಿಯ ಫ್ರೇಮ್ ಇತ್ತು. ಸುಕ್ಕುಸುಕ್ಕಾಗಿದ್ದ ಅವನ ಚಪ್ಪಟೆ ಮುಖ, ಬರಿ ಮೈ, ಚರ್ಮಕ್ಕೆ ಅಂಟಿಕೊಂಡಂತಿರುವ ನೀಲಿ ಜೀನ್ಸ್ ಪ್ಯಾಂಟ್, ಅವನು ಹಾಕಿದ್ದ ಕನ್ನಡಕ, ಕಪ್ಪು ಹ್ಯಾಟ್ ಅವನನ್ನು ಒಬ್ಬ ವಿದ್ವಾಂಸನಂತೆ ತೋರಿಸತೊಡಗಿದ್ದವು. ಅವನ ಕೈಯಲ್ಲಿ ಪಿಸ್ತೂಲು ಇತ್ತು. ಅವರಿಬ್ಬರ ಕೈಯಲ್ಲಿಯೂ ಗನ್‌ಗಳಿದ್ದವು.

'ನಮ್ಮ ಗಾಡಿ ಆ್ಯಕ್ಸಿಡೆಂಟ್ ಆಗೇತಿ...' ಮಕ್ಕಳು ಅಪರಿಚಿತರಿಗೆ ಚೀರಿ ಹೇಳಿದವು.

ಕನ್ನಡಕ ಧರಿಸಿದ್ದ ಆ ವ್ಯಕ್ತಿ ಕೆಳಗೆ ಇಳಿಯತೊಡಗಿದ. ಕಂದಕದಲ್ಲಿ ತಾನೂ ಜಾರಿ ಬಿದ್ದುಗಿದ್ದೇನೋ